## ಜಿಲ್ಲಾಧಿಕಾರಿ ಹಾಗೂ ಗ್ರಾಮ ಲೆಕ್ಕಾಧಿಕಾರಿ ನೇರ ನೇಮಕಾತಿ ಪ್ರಾಧಿಕಾರ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

**ಸಂ.ಇಎಸ್‌ಟಿ (1) ಸಿಆರ್–275/2009–10, ದಿನಾಂಕ 23–2–2010.**

**ವಿಷಯಃ** – ಶಿವಮೊಗ್ಗ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿ (ಭೂಮಿ ಕೇಂದ್ರ) ಹುದ್ದೆಗಳಿಗೆ ನೇರ ನೇಮಕಾತಿ– ಅರ್ಜಿ ಆಹ್ವಾನಿಸುವ ಬಗ್ಗೆ.

**ಉಲ್ಲೇಖಃ** – 1. ಸರ್ಕಾರದ ಅಧಿಸೂಚನೆ ನಂ.ಕಂಇ.299.ಬಿಎಸ್‌ಸಿ. 2006, ದಿಃ 24–7–2009 ಮತ್ತು 8–9–2009.

2. ಈ ಕಾರ್ಯಾಲಯದ ಈ ಹಿಂದಿನ ಅಧಿಸೂಚನೆ ಸಮ ಸಂಖ್ಯೆ ದಿಃ 29–9–09.

3. ಈ ಕಾರ್ಯಾಲಯದಿಂದ ಹೊರಡಿಸಲಾದ ನೇರ ನೇಮಕಾತಿ ಆದೇಶ ಸಮ ಸಂಖ್ಯೆ ದಿಃ 4–1–10.

### ಅ ಧಿ ಸೂ ಚ ನೆ

ಸರ್ಕಾರದ ಉಲ್ಲೇಖ–1ರ ಆದೇಶಾನುಸಾರ, ಉಲ್ಲೇಖ–2ರ ಅಧಿಸೂಚನೆಯಲ್ಲಿ ಶಿವಮೊಗ್ಗ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇದ್ದ ಗ್ರಾಮ ಲೆಕ್ಕಾಧಿಕಾರಿ ವೃಂದದ ಒಟ್ಟು 45 ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ ಈ ಪೈಕಿ 38 ಹುದ್ದೆಗಳನ್ನು ಉಲ್ಲೇಖ–3ರಂತೆ ಈಗಾಗಲೇ ಭರ್ತಿಗೊಳಿಸಲಾಗಿದೆ. ಅಂಗವಿಕಲರ ಮೀಸಲಾತಿಯ 3 ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿ ಲಭ್ಯವಾಗದ ಕಾರಣ ಈ ಹುದ್ದೆಗಳನ್ನು ಮರು ಅಧಿಸೂಚನೆಗಾಗಿ ಕಾಯ್ದಿರಿಸಲಾಗಿತ್ತು. ಹಾಗೆಯೇ, ಆಯ್ಕೆಗೊಂಡ 4 ಅಭ್ಯರ್ಥಿಗಳು ಸಂದರ್ಶನಕ್ಕೆ ಗೈರುಹಾಜರಾಗಿದ್ದ ಕಾರಣ ಈ ಹುದ್ದೆಗಳು ಮತ್ತು ಅಂಗವಿಕಲರ ಮೀಸಲಾತಿಯ 3 ಹುದ್ದೆಗಳು ಸೇರಿ ಒಟ್ಟು 7 ಹುದ್ದೆಗಳನ್ನು ಭರ್ತಿಗೊಳಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಷರತ್ತುಗಳುಃ –**

1) **ಹುದ್ದೆಯ ವಿವರಃ** – ಗ್ರಾಮ ಲೆಕ್ಕಾಧಿಕಾರಿ (ಭೂಮಿ ಕೇಂದ್ರ).

2) ಅಭ್ಯರ್ಥಿಗಳು ಪ್ರಿ ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆ ಅಥವಾ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ ಅಡಿ 12ನೇ ತರಗತಿ ತೇರ್ಗಡೆ ಅಥವಾ ಐ.ಸಿ.ಎಸ್.ಇ. ತೇರ್ಗಡೆ ಹೊಂದಿರತಕ್ಕದ್ದು.

3) ಅಭ್ಯರ್ಥಿಗಳ ಆಯ್ಕೆ **ಮೆರಿಟ್ ಮತ್ತು ಮೀಸಲಾತಿ** ಆಧಾರದ ಮೇರೆಗೆ ಮಾತ್ರ.

4) **ಅರ್ಜಿ ಶುಲ್ಕ:** – ಪ.ಜಾ/ಪ.ವರ್ಗ/ಅಂಗವಿಕಲ/ಮಹಿಳಾ ಅಭ್ಯರ್ಥಿಗಳು – ರೂ.100–00, ಸಾಮಾನ್ಯ/2ಎ ಅಭ್ಯರ್ಥಿಗಳು ರೂ.200–00 (ಶುಲ್ಕ ಪಾವತಿಸದ ಅರ್ಜಿ ತಿರಸ್ಕರಿಸಲಾಗುವುದು). ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಯಾವುದೇ ಶಾಖೆ ಯಿಂದ ಪಡೆದು ಜಿಲ್ಲಾಧಿಕಾರಿ, ಶಿವಮೊಗ್ಗ ಇವರ ಹೆಸರಿನಲ್ಲಿ ಡಿ.ಡಿ. ಮೂಲಕ ಸಲ್ಲಿಸುವುದು.

5) **ಅರ್ಜಿದಾರರ ವಯೋಮಿತಿ:** – ಪ.ಜಾ/ಪ.ಪಂ. ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷ
(ಕನಿಷ್ಠ 18 ವರ್ಷ) ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 38 ವರ್ಷ
ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 35 ವರ್ಷ
ಅಂಗವಿಕಲ/ವಿಧವಾ ಅಭ್ಯರ್ಥಿಗಳಿಗೆ 10 ವರ್ಷಗಳ ಸಡಿಲಿಕೆ.

6) ಸರ್ಕಾರದ ಅಧಿಸೂಚನೆ ನಂ.ಡಿಪಿಎಆರ್.52.ಎಸ್ಆರ್ಆರ್.99, ದಿ: 29–11–02ರ ಅನ್ವಯ ಈ ಕೆಳಕಂಡ ಅಂಗವೈಕಲ್ಯತೆ ಹೊಂದಿರುವ ಅಭ್ಯರ್ಥಿಗಳು **ಮಾತ್ರ** ಅರ್ಜಿ ಸಲ್ಲಿಸತಕ್ಕದ್ದು.

a) Leprosy cured (ಕುಷ್ಟರೋಗದಿಂದ ಗುಣಮುಖರಾದವರು).
b) Hearing impaired (ಶ್ರವಣ ದೋಷವುಳ್ಳವರು).
c) Mentally ill (ಮಾನಸಿಕ ಅಸ್ವಸ್ಥತೆ).

7) **ಅರ್ಜಿ ಸಲ್ಲಿಕೆ:** – ಅರ್ಜಿ ನಮೂನೆಯನ್ನು ದಿನಾಂಕ 1–3–2010ರ ನಂತರ ವೆಬ್‌ಸೈಟ್ **shimoga.nic.in/va** ತೆರೆದು ಡೌನ್‌ಲೋಡ್ ಮಾಡುವ ಮೂಲಕ ಪಡೆದು ಭರ್ತಿಗೊಳಿಸುವುದು. ಅರ್ಜಿ ನಮೂನೆಯೊಂದಿಗೆ ದೃಢೀಕೃತ ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಪ್ರಿಯುನಿವರ್ಸಿಟಿ ತೇರ್ಗಡೆ ಅಥವಾ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ 12ನೇ ತರಗತಿ ತೇರ್ಗಡೆ ಅಥವಾ ಐ.ಸಿ.ಎಸ್.ಸಿ. ತೇರ್ಗಡೆಯಾದ ಅಂಕಪಟ್ಟಿ ಲಗತ್ತಿಸುವುದು. **"ಜಿಲ್ಲಾಧಿಕಾರಿ, ಶಿವಮೊಗ್ಗ"** ಇವರ ಹೆಸರಿನಲ್ಲಿ ಶುಲ್ಕ ಪಾವತಿಸಿದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಡಿ.ಡಿ. ಲಗತ್ತಿಸುವುದು (ಎಸ್.ಬಿ.ಎಂ. ಮಾತ್ರ). ಮೀಸಲಾತಿಯಡಿ ಅರ್ಜಿ ಸಲ್ಲಿಸುವ ಅರ್ಜಿದಾರರು ದೃಢೀಕೃತ ಜಾತಿ ಪ್ರಮಾಣ ಪತ್ರಮತ್ತು ಈ ಸಂಬಂಧ ಅಫಿಡವಿಟ್ ಅನ್ನು ತಪ್ಪದೇ ಲಗತ್ತಿಸುವುದು.

8) ಭರ್ತಿಗೊಳಿಸಿದ ಅರ್ಜಿ/ದೃಢೀಕೃತ ದಾಖಲೆ/ಡಿ.ಡಿ. ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸುವುದು.

9) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **31–3–2010 ಸಂಜೆ 5.00 ಘಂಟೆ.** ವಿಳಂಬವಾಗಿ ಸ್ವೀಕೃತಿಯಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

10) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ Helpline : - 08182 225410
08182 221010

**ವಿ.ಸೂ:** – ಅಪೂರ್ಣ ಮಾಹಿತಿ/ಶುಲ್ಕ ಪಾವತಿಸದ/ವಿಳಂಬಿತ/ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**11)ಹುದ್ದೆಗಳ ವರ್ಗೀಕರಣ (ಒಟ್ಟು ಹುದ್ದೆಗಳು 07): –**

| | ಮ.ಅ | ಗ್ರಾ.ಅ | ಅಂ.ವಿ | ಕ.ಮಾ.ಅ | ಒಟ್ಟು |
|---|---|---|---|---|---|
| **ಸಾ.ಅ** | - | - | 01 | 01 | **02** |
| **ಪ,ಜಾ** | 01 | - | 01 | - | **02** |
| **ಪ.ಪಂ** | 01 | - | - | - | **01** |
| **2A** | - | 01 | 01 | - | **02** |
| **Total** | **02** | **01** | **03** | **01** | **07** |

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯವನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಜಿಲ್ಲಾಧಿಕಾರಿ ಹಾಗೂ
ಗ್ರಾಮ ಲೆಕ್ಕಾಧಿಕಾರಿ ನೇರ ನೇಮಕಾತಿ
ಆಯ್ಕೆ ಪ್ರಾಧಿಕಾರ, ಶಿವಮೊಗ್ಗ ಜಿಲ್ಲೆ.